**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್.ನಗರ**

ಸಿಸಿ ನಂ. 72/2025

**ಪಿರ್ಯಾದುದಾರರುಃ** ಶ್ರೀಮತಿ ಕುಮಾರಿ ಕೋಂ ಟಿ.ಸಿ.ಚಂದ್ರಶೇಖರಯ್ಯ,

**--ವಿರುದ್ಧ –**

**ಆರೋಪಿಃ** ಶ್ರೀ. ಜೆ.ಡಿ.ಮಂಜುನಾಥ್ ಬಿನ್ ದ್ಯಾವಪ್ಪ,

**ಃಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 355 ರಡಿಯಲ್ಲಿ ಆರೋಪಿಯ ಹೇಳಿಕೆಃ**

ಪ್ರಶ್ನೆ-1 ಫ್ರಾಸಾ-1 ಶ್ರೀಮತಿ ಕುಮಾರಿ ಕೋಂ ಟಿ.ಸಿ.ಚಂದ್ರಶೇಖರಯ್ಯ ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿಯಾದ ನೀವು ಫ್ರಾಸಾ-1ರವರಿಗೆ ರೂ.15,00,000/- ಹಣವನ್ನು ಕಾನೂನು ಬದ್ಧವಾಗಿ ಕೊಡಬೇಕಾಗಿದ್ದು, ಅದರ ಮರು ಪಾವತಿಗಾಗಿ ನಿಮ್ಮ ಉಳಿತಾಯ ಖಾತೆ ಇರುವ **ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಜ್ಞಾನ ಜ್ಯೋತಿ ನಗರ ಶಾಖೆ, ಬೆಂಗಳೂರು,** ಸೇರಿದ ಚೆಕ್ ಸಂಖ್ಯೆ 675947 ದಿನಾಂಕ: 15/10/2024 ವನ್ನು ನಮೂದಿಸಿ ಕೊಟ್ಟಿದ್ದೀರೆಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ-2 ಫ್ರಾಸಾ-1 ಶ್ರೀಮತಿ ಕುಮಾರಿ ಕೋಂ ಟಿ.ಸಿ.ಚಂದ್ರಶೇಖರಯ್ಯ ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು, ತಮ್ಮ ಉಳಿತಾಯ ಖಾತೆ ಇರುವ **ಕೆನರಾ ಬ್ಯಾಂಕ್, ಕೆ.ಆರ್.ನಗರ ಶಾಖೆ,** ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು **"Payment stopped by drawer"** ಎಂಬ ಹಿಂಬರಹದೊಂದಿಗೆ ದಿನಾಂಕ:16.10.2024 ರಂದು ಚೆಕ್ಕು ಹಿಂದಿರುಗಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ-3 ಫ್ರಾ.ಸಾ.-1 ಶ್ರೀಮತಿ ಕುಮಾರಿ ಕೋಂ ಟಿ.ಸಿ.ಚಂದ್ರಶೇಖರಯ್ಯ ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಮುಂದುವರೆದು ಅವರು ತಮ್ಮ ವಕೀಲರ ಮುಖಾಂತರ ಆರೋಪಿಯಾದ ನಿಮಗೆ ನೊಂದಾಯಿತ ಅಂಚೆ ಮೂಲಕ ದಿನಾಂಕ: 31.10.2024 ರಂದು ತಿಳುವಳಿಕೆ ಪತ್ರ ಕಳುಹಿಸಿದರೂ ಸಹ ನೀವು ಕಾನೂನುಬದ್ಧವಾಗಿ ಪಾವತಿ ಮಾಡಬೇಕಾದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಕ್ಷ್ಯ ನುಡಿದಿರುತ್ತಾರೆ, ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ:4 ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ?
ಉತ್ತರ:

ಪ್ರಶ್ನೆ: 5 ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ?
ಉತ್ತರ:

(ಮೇಲ್ಕಂಡ ಆರೋಪದ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ಆರೋಪಿ ನೀಡಿದ ಉತ್ತರಗಳನ್ನು ಸ್ವತಃ ನಾನೇ ಕೇಳಿಸಿಕೊಂಡು ನನ್ನ ಸ್ವ ಬರವಣಿಗೆಯಲ್ಲಿ ಉತ್ತರಗಳನ್ನು ನಮೂದು ಮಾಡಿರುತ್ತೇನೆ ಇವು ಆರೋಪಿ ತನ್ನ ಸ್ವಇಚ್ಛೆಯಿಂದ ನೀಡಿರುವ ಉತ್ತರಗಳಾಗಿರುತ್ತವೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

**ದಿನಾಂಕ: 04.04.2025**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆ ಆರ್ ನಗರ.**